ಎಂದುಕೊಳ್ಳಬೇಡಿ. ನನಗೆ ನೋಡಿ ತಾಪತ್ರಯ ಮುಗಿಯುವುದು ಅಂತಲೇ ಇಲ್ಲ. ನೀವೂ ಆಗಾಗ ತಾಪತ್ರಯ ಅನ್ನುತ್ತಿರುತ್ತೀರಿ. ಅವನು ನೋಡಿ, ಊರಲ್ಲೊಬ್ಬಳನ್ನು, ಇಲ್ಲೊಬ್ಬಳನ್ನು ಇಟ್ಟುಕೊಂಡು ಎಷ್ಟು ಆರಾಮಾಗಿದ್ದಾನೆ'' ಎಂದ.

''ಅವನೂ ಉಪ್ಪುಖಾರ ತಿನ್ನುವ ಮನುಷ್ಯ ತಾನೇ, ಹೇಗಾದರೂ ಬದುಕಿಕೊಳ್ಳಲಿ ಬಿಡು'' ಎಂದೆ ನಾನು.

''ಅಲ್ಲಿಗೇ ಮುಗಿಯಲಿಲ್ಲ, ಪೂರ್ತಿ ಕೇಳಿ. ಇವನಿಗೆ ಊರಲ್ಲಿ ಹೆಂಡತಿಯಿದ್ದ ಹಾಗೆಯೇ ಅವಳಿಗೆ ಫಿಲಿಫೀನ್ಸ್‌ನಲ್ಲಿ ಗಂಡನೂ, ಮಕ್ಕಳೂ ಇದ್ದಾರೆ'' ಎಂದ.

ಆಶ್ಚರ್ಯವಾಗಿ, ''ಹೌದಾ?'' ಎಂದೆ ನಾನು.

''ಮೇಡಂ ಕಳಿಸಿದರು ಅಂತ ನಾವು ಅವನಿಗೆ ಕೆಲಸಕೊಟ್ಟಿದ್ದೇವೆ. ಈಗ 'ಹೌದಾ!' ಅಂದ್ರೆ ಏನು ಪ್ರಯೋಜನ?'' ಮ್ಯಾನೇಜರರನ್ನು ಉದ್ದೇಶಿಸಿ, ನನ್ನನ್ನೂ ಸೇರಿಸಿಕೊಂಡು ಮೂದಲಿಸಿ ಎದ್ದು ಹೊರಟು ಹೋಗಿದ್ದ.

ನಿಜಕ್ಕೂ ಭೀಮಸೇನನ ಮುಖ ನೋಡಿದ್ರೆ ಹಾಗನ್ನಿಸುತ್ತಿರಲಿಲ್ಲ. ಲಿಗೋನ ಬ್ರೇಕಿಂಗ್ ನ್ಯೂಸ್ ಸಿಕ್ಕಿದ ಮೇಲೆ ಭೀಮಸೇನ ಚಹಾ ಹಿಡಿದು ಬರುವಾಗಲೆಲ್ಲ ಈ ಬಗ್ಗೆ ಕೇಳಬೇಕೆನಿಸಿತ್ತು. ಆತನ ಖಾಸಗಿ ಬದುಕಿನ ಬಗ್ಗೆ ಕೇಳುವುದು ನನ್ನ ಸಂಭಾವಿತತನಕ್ಕೆ ಒಪ್ಪಿಗೆಯಾಗಲಿಲ್ಲ. ಇಲಿ ಹೋದರೆ ಹುಲಿ ಹೋಯಿತು ಎನ್ನುವ ಲಿಗೋನ ಮಾತುಗಳನ್ನು ಕೇಳಿ ವ್ಯವಹರಿಸುವುದನ್ನು ನಾನು ಬಿಟ್ಟುಬಿಟ್ಟಿದ್ದೆ. ಹಾಗಿದ್ದರೂ ಗಂಭೀರ ಸಂಶಯವೊಂದು ನನ್ನಲ್ಲಿ ಹುಟ್ಟಿಕೊಂಡಿತ್ತು. ತೀರ ಹೊಸಬನಾದ ಹುಡುಗನಲ್ಲಿ ಮ್ಯಾನೇಜರ್ ಯಾಕೆ ಗೂಢಚರ್ಯೆ ಮಾಡಲು ಹೇಳುತ್ತಾರೆ? ಈ ಸುದ್ದಿಯಲ್ಲಿ ಸತ್ಯ ಇದೆಯೇ? ಅವನೇ ಹೋಗಿ ಏನಾದರೂ ಚಾಡಿ ಹೇಳುತ್ತಾನೆಯೇ? ಮ್ಯಾನೇಜರರಿಗೆ ತಾನು ನಿಕಟವಾಗಿದ್ದೇನೆ ಎಂದು ತೋರ್ಪಡಿಸಿ ಭೀಮಸೇನನೇ ತನಗೆ ಯಾರೂ ತೊಂದರೆ ಕೊಡದಂತೆ ನಾಟಕ ಮಾಡುತ್ತಿದ್ದಾನೆಯೇ? ಮ್ಯಾನೇಜರರು ಇಂಥವರನ್ನು ಪುರಸ್ಕರಿಸುತ್ತಾರೆಯೇ? – ಈ ಎಲ್ಲ ಪ್ರಶ್ನೆಗಳನ್ನು ಜೋಡಿಸಿ ನೋಡುವಾಗ ಸಂಶಯಗಳೇ ಜಾಸ್ತಿಯಾಗತೊಡಗಿದ್ದವು. ಆಫೀಸಿನವರೇ ಕೆಲವರು ಸೇರಿ ತಮಗೆ ತೊಡಕೆನ್ನಿಸಿದ ಇವನ ಮೇಲೆ ಇಲ್ಲಸಲ್ಲದ ಕಂಪ್ಲೇಂಟ್ ಮಾಡಿ ನೌಕರಿಯಿಂದ ಓಡಿಸಲು ಪ್ರಯತ್ನಿಸುತ್ತಿದ್ದಾರೆಯೇ ಎನ್ನುವ ಸಂದೇಹವೂ ಬಂದಿತ್ತು. ಏನೇ ಇರಲಿ, ಸತ್ಯ ಯಾವತ್ತಾದರೂ ಹೊರಗೆಬರದೆ ಇರುವುದಿಲ್ಲವಲ್ಲ ಎಂದು ಸುಮ್ಮನಾಗಿದ್ದೆ ನಾನು.

ಒಂದಾರು ತಿಂಗಳು ಕಳೆದಿರಬಹುದು. ಒಂದು ದಿನ ಬೆಳಗ್ಗೆ ಮ್ಯಾನೇಜರ್, ''ಫ್ರೀ ಇದ್ದೀಯ? ಇಲ್ಲಿ ಬಾ'' ಎಂದರು. ಅವರ ಕ್ಯಾಬಿನ್ನಿಗೆ ಹೋದೆ. ''ಬಾ ಕೂತ್ಕೋ'' ಎಂದವರೇ, ''ಭೀಮಸೇನನ ಬಗ್ಗೆ ನಿನ್ನ ಅಭಿಪ್ರಾಯ ಏನು?'' ನೇರ ಪ್ರಶ್ನೆ ಕೇಳಿದರು.

''ನನ್ನ ಮಟ್ಟಿಗೆ ಚಹಾದಲ್ಲಿ ಸಕ್ಕರೆ ಸ್ವಲ್ಪ ಕಡಿಮೆ ಹಾಕುತ್ತಾನೆ ಎನ್ನುವುದನ್ನು ಬಿಟ್ಟರೆ ಬೇರೇನೂ ಸಮಸ್ಯೆ ಇಲ್ಲ. ಆದರೆ, ಎಲ್ಲರೂ ಆತ ನಿಮ್ಮ ಚೇಲಾ ಅನ್ನುತ್ತಿದ್ದಾರೆ'' ಎಂದೆ ನಾನು.

''ಅದೇ ನನಗೂ ಆಶ್ಚರ್ಯ. ಹಾಗೊಂದು ಅಭಿಪ್ರಾಯ ಬರಲು ಕಾರಣವೇನು? ನೀನ್ಯಾಕೆ ಹೀಗೆ ಸುದ್ದಿ ಹಬ್ಬಿದೆ ಅಂತ ಈ ಮೊದಲು ಹೇಳಲಿಲ್ಲ?'' ಅಂದರು.

''ಗೂಢಚಾರಿ ಆತ ಎಂದು ಮುಕುಂದ ಒಂದು ಬಾರಿ ಹೇಳಿದ್ದ. ಯಾಕೆ ಹಾಗೆ ಹೇಳುತ್ತಿಯಾ ಅಂತ ಕೇಳಿದ್ದಕ್ಕೆ ಆತ ಸಮರ್ಪಕ ಉತ್ತರ ಕೊಡಲಿಲ್ಲ. ಲಿಗೋ ಕೂಡ ಒಮ್ಮೆ ಬಂದು ಏನೇನೋ ಹೇಳಿದ್ದ. ಕಂಪನಿಗೆ ಸಂಬಂಧ ಇಲ್ಲದ ಮಾತುಗಳು. ಬೇರೆ ಪುರಾವೆ ಇದುವರೆಗೂ ನನಗೆ ಸಿಕ್ಕಿಲ್ಲ'' ಎಂದೆ ನಾನು.

''ನಿನ್ನೆ ಕುಡಿದ ಅಮಲಿನಲ್ಲಿ ನಾನು ಬಾಯಿಬಿಟ್ಟರೆ ಇಲ್ಲಿ ಐದಾರು ಮಂದಿ ಮನೆಗೆ ಹೋಗುತ್ತಾರೆ